ಬಗೆಯ ವಿಶೇಷಣಗಳಿಂದ ಕೀರ್ತಿಸಿದ್ದಾರೆ. ಜಿ.ಎಚ್. ನಾಯಕರ ವ್ಯಕ್ತಿತ್ವ ಮತ್ತು ಕ್ರಿಯೆಗಳು ವಿದ್ವತ್ ವಲಯದಲ್ಲಿ ಈಗಾಗಲೇ ಚಿರಪರಿಚಿತ. ಅಂಬೇಡ್ಕರ್ ಮತ್ತು ಗಾಂಧಿಯವರನ್ನು ಎದುರುಬದರು ನಿಲ್ಲಿಸಿ ಫಸಲು ತೆಗೆಯಲು ಹಂಬಲಿಸುವ ಭಾರತೀಯ ರಾಜಕಾರಣದ ಸಿಕ್ಕುಗಳು ಅರ್ಥವಾಗಲು ಈ ಪುಸ್ತಕವನ್ನು ನಾವೆಲ್ಲರೂ ಒಮ್ಮೆಯಾದರೂ ಕೈಗೆತ್ತಿಕೊಳ್ಳಲೇಬೇಕು. 'ಸ್ಮೈಲಿಂಗ್ ಬುದ್ಧ' ಎನ್ನುವ ಹೆಸರಿನಲ್ಲಿರುವ ಕುಹಕ, ಮಸೀದಿ ಕೆಡವಲು ಆರಿಸಿಕೊಂಡ 'ಡಿಸೆಂಬರ್ 06'ನೇ ತಾರೀಖಿನಲ್ಲಿ ಅಡಗಿರುವ ರಾಜಕಾರಣದ ತರ್ಕಗಳು, ಭಾರತದ ರಾಜಕಾರಣದಲ್ಲಿ, ದಲಿತರು ವಂಶೋದ್ಧಾರಕ್ಕಾಗಿ ಮಕ್ಕಳನ್ನು ಎತ್ತಿಕೊಡುವ ಸೊಸೆಯಂದಿರ ಪಾತ್ರ ವಹಿಸುತ್ತಿರುವುದು ಮುಂತಾದ ಕಟುವಾಸ್ತವಗಳನ್ನು ಎಳೆಎಳೆಯಾಗಿ ಬಿಡಿಸಿ ತೋರಿಸಲಾಗಿದೆ. ಆದರೆ ನಮ್ಮ ಬಹುತೇಕ ದಲಿತ ಚಿಂತನೆಗಳಲ್ಲಿ, ಬರಹಗಳಲ್ಲಿ, ಗೋಷ್ಠಿಗಳಲ್ಲಿ ಈ ಬಗೆಯ ಚಿಂತನೆಗಳ ಗೈರಾಗಿರುವುದು ಎದ್ದು ಕಾಣುತ್ತದೆ. ಬಾಬಾ ಸಾಹೇಬರು 1945ರಲ್ಲಿ ಬರೆದ 'ಥಾಟ್ಸ್ ಆನ್ ಪಾಕಿಸ್ತಾನ್' ಪುಸ್ತಕವನ್ನು ರಮಾಬಾಯಿಯವರಿಗೆ ಅರ್ಪಿಸುತ್ತಾ, "ಸ್ನೇಹಿತರೇ ಇಲ್ಲದೆ ಚಿಂತೆ ಮತ್ತು ಅಭಾವವೇ ನಮ್ಮನ್ನು ಕವಿದಿದ್ದ ದಿನಗಳಲ್ಲಿ ಎದೆಗುಂದದೆ ನನ್ನೊಂದಿಗೆ ಸಂಕಟ ಪಡಲು ಸದಾ ಸಿದ್ಧಳಿರುತ್ತಿದ್ದಕ್ಕೆ ಗೌರವಾರ್ಥವಾಗಿ" ಎಂದು ಅರ್ಪಿಸಿರುವುದು ಗಮನಾರ್ಹ. ಅಂದಹಾಗೆ ಆಧುನಿಕ ಭಾರತದ ಸಂದರ್ಭದಲ್ಲಿ ಗಾಂಧೀಜಿ ಮತ್ತು ಅಂಬೇಡ್ಕರ್ ಅವರಿಗೆ ಅರ್ಪಣೆಯಾಗಿರುವಷ್ಟು ಕೃತಿಗಳು ಮತ್ತಾರಿಗೂ ಆಗಿಲ್ಲ.

ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಡೆಯುತ್ತಿರುವ ದಾಳಿ ತೀವ್ರವಾಗಿದ್ದ ಕಾಲಕ್ಕೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕುರಿತಂತೆ ವಿವಿಧ ಲೇಖಕರ ಚಿಂತನೆಗಳನ್ನು ಒತ್ತಟ್ಟಿಗೆ ತಂದ ನಮ್ಮೊಳಗಿನ ಮತ್ತೊಬ್ಬ ಅಂಬೇಡ್ಕರಿಸ್ಟ್ ಚಿಂತಕಿ ಡಾ. ಎಚ್.ಎಸ್ ಅನುಪಮಾ, 'ಅಭಿವ್ಯಕ್ತಿ ಸ್ವಾತಂತ್ರ್ಯ' ಕೃತಿಯನ್ನು 'ಅಭಿವ್ಯಕ್ತಿ ಸ್ವಾತಂತ್ರ್ಯದ ರೂಪಕದಂತಿರುವ ಜಿ.ಎಚ್. ನಾಯಕರಿಗೆ' ಅರ್ಪಿಸಿದರು. ಯು.ಆರ್. ಅನಂತಮೂರ್ತಿಯವರ ಚಿಂತನಶೀಲ ಬರಹಗಳೆಲ್ಲವೂ ಅವರ ಗೆಳೆಯರಿಗೆ ಅರ್ಪಿತವಾಗಿವೆ. ವಿಚಾರವಂತರನ್ನು ದುರುಳರೆಂದು ಘೋಷಿಸಿ ತರುವಾಯ ಅವರನ್ನು ವಧಿಸುವುದು ಆಧುನಿಕ ರಾಜಕಾರಣದ ಕಾರ್ಯಾಚರಣೆಯ ಭಾಗವೇ ಆಗಿದೆ. ಪ್ರಭುತ್ವ, ಧರ್ಮ, ಆಡಳಿತ, ನಾಯಕರಲ್ಲಿರುವ ಮಿತಿಗಳನ್ನು ಬೊಟ್ಟು ಮಾಡಿ ತೋರುವವರನ್ನು ಗುರಿಯಾಗಿಸಿ ಕೊಲೆಗೈಯ್ಯಲಾಗುತ್ತಿದೆ. ಇಂತಹ ಸಂದರ್ಭದಲ್ಲಿಯೇ ಕಲಾವಿದ ಹೆಚ್ಚು ಜವಾಬು ದಾರಿಗಳನ್ನು ಹೊರುವಂತೆ ಚರಿತ್ರೆ ಒತ್ತಾಯಿಸುತ್ತದೆ. ನರೇಂದ್ರ ದಾಬೋಲ್ಕರ್, ಗೋವಿಂದ ಪಾನ್ಸರೆ, ಎಂ.ಎಂ. ಕಲಬುರ್ಗಿ ಮತ್ತು ಗೌರಿ ಲಂಕೇಶ್ ಅವರು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ತಮ್ಮ ಉಸಿರನ್ನು ಬಲಿಗೊಡ ಬೇಕಾಯಿತು. ರಹಮತ್ ತರೀಕೆರೆಯವರು ತಮ್ಮ 'ನೆತ್ತರ ಸೂತಕ'ವನ್ನು ಈ ನಾಲ್ವರಿಗೆ ಮೀಸಲು ಮಾಡಿದ್ದಾರೆ. ಕಾಲದ ಕ್ರೌರ್ಯವನ್ನು ಲೇಖಕನಾದವನು ತಾತ್ವಿಕವಾದ ಬಗೆಯಲ್ಲಿ ಎದುರುಗೊಳ್ಳಬೇಕಾಗುತ್ತದೆ. ಅವನಿಗೆ ಇದುವೆ ಋಜುಮಾರ್ಗ. ಆದ್ದರಿಂದಲೇ ಗೌರಿಯ ಕೊಲೆಯ ತರುವಾಯ 'ನಾನೂ ಗೌರಿ', 'ನಾನೂ ಕಲಬುರ್ಗಿ' ತಲೆಬರಹದ ಪತ್ರಿಕೆಗಳು, ಟ್ಯಾಬ್ಲಾಯ್ಡ್‌ಗಳು, ಕೈಪಿಡಿಗಳು ಹೊರಬಂದವು. ಇಲ್ಲಿ 'ನಾನೂ ಗೌರಿ', 'ನಾನೂ ಕಲಬುರ್ಗಿ' ಎನ್ನುವ ಆತ್ಮಪ್ರತ್ಯಯಗಳು ಏನನ್ನು ಹೇಳುತ್ತಿವೆ? ಕೊಲೆಗಡುಕರಿಗೆ, ನೀವು ಈ ಸತ್ಯಸುಭಗರ ದೇಹವನ್ನು ಈಡಾಡಿರಬಹುದೇ ಹೊರತು ಅವರು ಪ್ರತಿಪಾದಿಸುತ್ತಿದ್ದ ಸತ್ಯವನ್ನಲ್ಲ. ಆ ಸತ್ಯಕ್ಕೆ ನಾವೆಲ್ಲ ಉತ್ತರಾಧಿಕಾರಿಗಳಂತೆ ಇದ್ದೇವೆ. ಅದನ್ನು ಇನ್ನೂ ಮೊನಚಾಗಿ ಮುಂದುವರಿಸುತ್ತೇವೆ. ಅದನ್ನೆಂದೂ ಕೊಲ್ಲಲು ಸಾಧ್ಯವಿಲ್ಲ ಎನ್ನುತ್ತಾ 'ಸತ್ಯಮೇವ ಜಯತೇ'ಯ ಸಂದೇಶವನ್ನು ಕೊಡಲು ಯತ್ನಿಸುತ್ತಿವೆಯೇ? ಅಂತಿಮವಾಗಿ ಕೊಂದವರೂ ಉಳಿಯುವುದಿಲ್ಲವಲ್ಲ.

ಸತ್ಯದ ಹಾದಿಯಲ್ಲಿ ನಡೆದು ದುರುಳರಿಂದ ಕೊಲೆಯಾದ ಸಾಕ್ರೆಟೀಸ್, ಏಸು, ಬಸವಣ್ಣ, ಗಾಂಧಿ, ಕಲಬುರ್ಗಿಯವರು ತಾವು ಪ್ರತಿಪಾದಿಸಿದ ತತ್ವಗಳಿಂದ ಜನಮಾನಸದಲ್ಲಿ ಆಚಂದ್ರಾರ್ಕ ಜಂಗಮರಾಗಿರುತ್ತಾರೆ. ಬರಗೂರು ರಾಮಚಂದ್ರಪ್ಪನವರ 'ಕರುಳು ಕಟ್ಟಿದ